**ಪ್ರಕಟಣೆಯ ಕೃಪೆಗಾಗಿ**

# ಗ್ರಾಮ ಪಂಚಾಯತ್ ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸರ್ಕಾರಕ್ಕೆ ನಮ್ಮ ಹತ್ತು ಪ್ರಶ್ನೆಗಳು

ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ
ದಿನಾಂಕ: 14–05–2020

1. ಗ್ರಾಮ ಪಂಚಾಯತ್ ಚುನಾವಣೆ ನಡೆಸುವುದು ಅಸಾಧ್ಯವೆನ್ನುವುದು ರಾಜ್ಯ ಸರ್ಕಾರದ ನಿಲುವು. ಗ್ರಾಮದ ವ್ಯಾಪ್ತಿಯಲ್ಲಿ ರೇಷನ್, ಬೇರೆ ಅವಶ್ಯಕತೆ, ಕಾರ್ಖಾನೆಗಳ ಆರಂಭ ಇವೆಲ್ಲಾ ಸಾಧ್ಯವಿರುವಾಗ ಚುನಾವಣೆ ಮಾತ್ರ ಯಾಕೆ ಅಸಾಧ್ಯ? ಚುನಾವಣೆಗಳನ್ನು ಸರಳ, ಚೊಕ್ಕ, ಕಡಿಮೆ ವೆಚ್ಚದಲ್ಲಿ ಮಾಡುವ ಬಗ್ಗೆ ಶ್ರೀ ರಮೇಶ್ ಕುಮಾರ್ ನೇತೃತ್ವದ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿ ಮಾಡಿದ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರ ಮರೆತು ಬಿಟ್ಟಿದೆಯೇ?
2. ಆಡಳಿತಾಧಿಕಾರಿ ಅಥವಾ ಆಡಳಿತ ಸಮಿತಿ ನೇಮಕಕ್ಕೂ ಮೊದಲು ಚುನಾವಣೆ ನಡೆಸುವುದು ಯಾಕೆ ಅಸಾಧ್ಯ ಎಂಬುದನ್ನು ಸಕಾರಣ ನೀಡಿ ಸಾಬೀತುಪಡಿಸಬೇಕು ಎಂಬ ಕಾನೂನಿನ ಅಂಶ ರಾಜ್ಯ ಸರ್ಕಾರಕ್ಕೆ ತಿಳಿದೇ ಇಲ್ಲವೇ ಅಥವಾ ಜಾಣ ಮರೆವೇ?
3. ಹಣದ ಹೊಳೆಹರಿಸಲು, ಪಕ್ಷ ರಾಜಕೀಯದ ಆಟವಾಡಲು, ಆಮಿಷವೊಡ್ಡುವ ಅಬ್ಬರದ ಪ್ರಚಾರ ಮಾಡಲು ಕಷ್ಟವಾಗುವುದೆಂದು ಚುನಾವಣೆ ಮುಂದೂಡುವ ನಿರ್ಧಾರವೇ?
4. ಕೊಟ್ಟ ಕುದುರೆ ಏರಲಾರದವನು ಶೂರನೂ ಅಲ್ಲ, ಧೀರನೂ ಅಲ್ಲ ಎನ್ನುವ ಮಾತು ಪಂಚಾಯತ್ ಅಧಿಕಾರ ಚಲಾಯಿಸಬೇಕು–ಅದೊಂದು ಸ್ವಯಂ ಸರ್ಕಾರ ಎಂದು ಸದಾ ಬಾಯಲ್ಲಿ ಹೇಳುವವರಿಗೆ – ಕದ್ದು ಕುದುರೆ ಏರಿ ಅಧಿಕಾರದ ಭಂಡ ಸವಾರಿ ಮಾಡಹೊರಟಿರುವುದು ನ್ಯಾಯವೆನ್ನಿಸುತ್ತಿದೆಯೇ? ಇದು ಪ್ರಜಾಸತ್ತಾತ್ಮಕ ನಡೆಯೇ?
5. ಚುನಾವಣೆಯಲ್ಲಿ ಜನರು ಆಯ್ಕೆ ಮಾಡಿದ ಚುನಾಯಿತ ಸರ್ಕಾರ ಇರುವುದು ನ್ಯಾಯ, ಯಾಕೆಂದರೆ ಅದು ಜನರ ಮೂಲಭೂತ ಹಕ್ಕು. ಈ ಹಕ್ಕನ್ನೇ ಮೊಟಕುಗೊಳಿಸಿ, ಜನಾದೇಶವಿರದ ಆಡಳಿತ ಸಮಿತಿ, ಆಡಳಿತಾಧಿಕಾರಿಗಳ ಆಳ್ವಿಕೆಯನ್ನು ಜನರ ಮೇಲೆ ಹೇರುವುದು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಮಾರಕವಲ್ಲವೇ? ಹೀಗೆ ಜನರಿಗೆ ಉತ್ತರದಾಯಿಗಳಾಗದೇ ನೇಮಿಸಲ್ಪಡುವವರು, ಅವರನ್ನು ನೇಮಿಸಿದವರ ಕೃಪಾಕಟಾಕ್ಷಕ್ಕೆ ತಕ್ಕಂತೆ ನಡೆದುಕೊಳ್ಳುವ ಸಾಧ್ಯತೆಗಳು ನಿಮಗೆ ಕಾಣಿಸುತ್ತಿಲ್ಲವೇ?
6. ಕೊರೋನಾ ತುರ್ತು ಪರಿಸ್ಥಿತಿಯಲ್ಲಿ, ಕೇಂದ್ರ, ರಾಜ್ಯ ಸರ್ಕಾರದ ಯೋಜನೆಗಳು ಜನರಿಗೆ ತಲುಪುತ್ತಿವೆ ಎಂದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುತ್ತಿರುವ ಸರ್ಕಾರಗಳಿಗೆ, ಅವೆಲ್ಲಾ ಕಟ್ಟಕಡೆಯ ಜನರನ್ನೂ ಸಹ ತಲುಪಲು ಸಾಧ್ಯವಾಗಿರುವುದಕ್ಕೆ ಮೂಲವೇ ಸ್ಥಳೀಯ ಸರ್ಕಾರಗಳ ಅವಿರತ ಪ್ರಯತ್ನ ಎಂಬುದು ಗೊತ್ತಿಲ್ಲವೇ?
7. ಕೊರೋನಾ ತುರ್ತು ಪರಿಸ್ಥಿತಿಯಲ್ಲಿ ನೂರಾರು ಪಂಚಾಯತ್‌ಗಳು ಸ್ಥಳೀಯ ಸಂಘ–ಸಂಸ್ಥೆ, ದಾನಿಗಳಿಂದ ಸಹಾಯ ಸಹಕಾರ ಪಡೆದು ಜನರ ಸಂಕಷ್ಟಕ್ಕೆ ಸ್ಪಂದಿಸುತ್ತಿವೆ. ಹೀಗೆ ಜವಾಬ್ದಾರಿಯುತವಾಗಿ ಕಾರ್ಯನಡೆಸುತ್ತಿರುವ, ಜನ ಆಯ್ಕೆ ಮಾಡಿದ ಸ್ಥಳೀಯ ಸರ್ಕಾರವನ್ನು, ಆ ಕೋವಿಡ್ ಸೇನಾನಿಗಳನ್ನು ಈ ತುರ್ತು ಪರಿಸ್ಥಿತಿಯಲ್ಲಿ ಬದಲಿಸಿ ಬೇರೊಂದು ಆಡಳಿತ ಸಮಿತಿಯನ್ನು ನೇಮಿಸುವುದು, ಆಡಳಿತಾಧಿಕಾರಿ ವ್ಯವಸ್ಥೆಯನ್ನು ಹೇರುವುದು ಆಡಳಿತ ಕೇಂದ್ರೀಕರಣಕ್ಕೆ ಮಾಡುತ್ತಿರುವ ಹುನ್ನಾರ ಅನ್ನಿಸುವುದಿಲ್ಲವೇ?
8. ಈಗಿರುವ ಕೆಲಸದ ಒತ್ತಡದ ನಡುವೆ ಇನ್ನಷ್ಟು ಜವಾಬ್ದಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಕ ಮಾಡುವ ಅಧಿಕಾರಿಗಳ ಮೇಲೆ ಹೇರಿದರೆ ಅವರು ಜನಸಾಮಾನ್ಯರ ಅಗತ್ಯಕ್ಕೆ ಸ್ಪಂದಿಸಲಾರದೇ ಪರಿಸ್ಥಿತಿ ಬಿಗಡಾಯಿಸಬಹುದಲ್ಲವೇ?
9. ಜಂಗಮ ತತ್ವ, ಶರಣರ ತತ್ವ–ಆದರ್ಶದ ಮೇಲೆ ನಂಬಿಕೆ ಇರುವ, ಅದನ್ನು ಪದೇ ಪದೇ ಸ್ಥಳೀಯ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೆ, ಜನರಿಗೆ ಇದೇ ತನ್ನ ಆದರ್ಶವೆಂದು ಪುನರುಚ್ಛರಿಸುವವರಿಗೆ, ಈ ಜಂಗಮ ತತ್ವದ ಆಧಾರದಲ್ಲಿ ಇರುವ ಅಧಿಕಾರ, ಜವಾಬ್ದಾರಿ ವಿಕೇಂದ್ರೀಕರಣದ ನೆಲೆಯಲ್ಲಿ ಕಟ್ಟಿದ ವ್ಯವಸ್ಥೆಯನ್ನೇ ಕಿತ್ತು ಹಾಕಲು ಹೊರಟಂತೆ


***ಸ್ಫೂರ್ತಿದಾತರು:***

**ದಿ. ಶ್ರೀ ಎಲ್.ಸಿ.ಜೈನ್,**
ಮಾಜಿ ಸದಸ್ಯರು, ರಾಷ್ಟ್ರೀಯ ಯೋಜನಾ ಆಯೋಗ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ಭಾರತೀಯ ರಾಯಭಾರಿಗಳು

**ದಿ. ಶ್ರೀ ಮನು ಕುಲಕರ್ಣಿ,** ಗೌರವಾನ್ವಿತ ಹಿರಿಯ ಫೆಲೋ, ಸಾಮಾಜಿಕ ವಿಜ್ಞಾನಗಳ ಸಂಸ್ಥೆ, ಬೆಂಗಳೂರು

***ಸಲಹಾ ಸಮಿತಿ ಸದಸ್ಯರು:***

**ಡಾ. ವಿನೋದ್ ವ್ಯಾಸುಲು,**
ವಿಕೇಂದ್ರೀಕರಣ ಚಿಂತಕರು

**ಶ್ರೀ ಚಿರಂಜೀವ್ ಸಿಂಗ್** ಬೆಂಗಳೂರು, ಮಾಜಿ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರಕಾರ

**ಶ್ರೀ ಮೀನಾಕ್ಷಿ ಸುಂದರಂ,** ಮಾಜಿ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ, ಭಾರತ ಸರಕಾರ

**ಶ್ರೀ ರಘುನಂದನ್ ರಾಘವನ್,**
ಮಾಜಿ ಜಂಟಿ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ ಭಾರತ ಸರ್ಕಾರ, ಪ್ರಧಾನ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ

**ಶ್ರೀ. ಮಹಿಮಾ ಪಟೇಲ್**
ಟ್ರಸ್ಟೀ, ಜೆ.ಹೆಚ್. ಪಟೇಲ್ ಫೌಂಡೇಶನ್

**ಶ್ರೀ ಮೈಕೆಲ್ ಫೆರ್ನಾಡಿಸ್**
ಕಾರ್ಮಿಕ ಮುಖಂಡರು

**ಶ್ರೀ ವಿನಯ್ ಬೈಂದೂರು**
ಸಂಶೋಧಕರು, ವಿಕೇಂದ್ರಿಕರಣ

**ಶ್ರೀಮತಿ ನಂದನಾ ರೆಡ್ಡಿ**
ಸಂಚಾಲಕರು

***ಸಂಯೋಜನಾ ಸಮಿತಿ:***

**ಗ್ರಾಮ ಸ್ವರಾಜ್ಯ ವೇದಿಕೆ**
**ಮಹಿಳಾ ಸಮಖ್ಯ ಕರ್ನಾಟಕ**
**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
**ಸುಗ್ರಾಮ**
**ಜೆ.ಹೆಚ್.ಪಟೇಲ್ ಫೌಂಡೇಶನ್**

***ಸಂಯೋಜಕರು:***



**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
303/2, ಲಾಲ್ ಬಹದ್ದೂರ್ ಶಾಸ್ತ್ರಿ ನಗರ
ವಿಮಾನಪುರ ಅಂಚೆ
ಬೆಂಗಳೂರು–560 017
ಫೋನ್: 080–25234270, 25234272, 25234611
ಇ–ಮೇಲ್: cwc@pobox.com
cwcblr@gmail.com
ವೆಬ್: www.theconcernedforworkingchildren.org

ಅನ್ನಿಸುವುದಿಲ್ಲವೇ? ಸ್ಥಾವರವನ್ನು ನಮಸ್ಕರಿಸುತ್ತಾ, ಸ್ಮರಿಸುತ್ತಾ, ಉಪದೇಶಿಸುತ್ತಾ ಜಂಗಮ ತತ್ವ ಮರೆಯುವುದು ಸರಿಯೇ?

10. ಈಗಿನ ಪರಿಸ್ಥಿತಿಯಲ್ಲಿ ಹೆಚ್ಚು ಚರ್ಚೆಗಳಿಲ್ಲದೇ ಸಾಧಕ–ಬಾಧಕಗಳ ಬಗ್ಗೆ ವಿಮರ್ಶೆ ಮಾಡದೇ ತರಾತುರಿಯಲ್ಲಿ ಸಮಿತಿ ರಚನೆಗೆ ಅಥವಾ ಆಡಳಿತಾಧಿಕಾರಿ ನೇಮಕಕ್ಕೆ ಹೊರಟಿರುವುದು ಯಾರದ್ದೋ ವೈಯಕ್ತಿಕ ಹಿತಾಸಕ್ತಿ ಕಾಯುವಲ್ಲಿ, ರಾಜ್ಯದಲ್ಲಿ ಅಧಿಕಾರ ಹಿಡಿದ ಪಕ್ಷದಿಂದಾಗುವ ಪಕ್ಷ ರಾಜಕಾರಣ ಎಂಬ ಅನುಮಾನ ಬರುವುದಿಲ್ಲವೇ?



ದಾಮೋದರ ಆಚಾರ್ಯ
ಸಂಯೋಜಕರ ಪರವಾಗಿ
ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ

ಹೆಚ್ಚಿನ ಮಾಹಿತಿಗಾಗಿ:
ಕವಿತರತ್ನ: 94489 90480
ಕೃಪಾ ಎಂ.ಎಂ.: 99453 75430